## ನಿರ್ಲಕ್ಷ್ಯಕ್ಕೆ ತುತ್ತಾದ ಕಲ್ಮಠ

ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರದ ಹೊರವಲಯದಲ್ಲಿ ಸೋದೆ ಅರಸರು ನಿರ್ಮಿಸಿದ ಸುಂದರ ಕಲ್ಮಠವೊಂದಿದೆ. ಅದರ ಗರ್ಭಗುಡಿಯಲ್ಲಿ ಶಿವಲಿಂಗ ಅದರ ಎದುರಿಗೆ ಬೃಹತ್ ನಂದಿ ವಿಗ್ರಹವಿದೆ. ಕಲ್ಯಾಣಕ್ರಾಂತಿಯ ನಂತರ ಶಿವಶರಣ ಚೆನ್ನಬಸವಣ್ಣ ತನ್ನ ಅನುಯಾಯಿಗಳ ಸಂಗಡ ಕಾಲ್ನಡಿಗೆಯಲ್ಲಿ ಈ ಮಾರ್ಗದಿಂದ ಉಳವಿಗೆ ಹೋಗುವಾಗ ಕಲ್ಮಠದಲ್ಲಿ ತಂಗಿದ ಬಗ್ಗೆ ಐತಿಹ್ಯವಿದೆ.

ಒಂದು ಕಾಲದಲ್ಲಿ ವಚನ ಸಂಸ್ಕೃತಿಯ ಪ್ರತೀಕವಾಗಿ ನಿತ್ಯ ದಾಸೋಹಕ್ಕೆ ಪ್ರಸಿದ್ಧವಾದ ಕಲ್ಮಠ ಇಂದು ಶೋಚನೀಯ ಸ್ಥಿತಿಯಲ್ಲಿದೆ.

—ಶ್ರೀರಂಗ ವೆಂ.ಕಟ್ಟಿ ಯಲ್ಲಾಪುರ





## ಮುಂಡಿಗೆ ಫಲ

ಕೇದಿಗೆ ಜಾತಿಗೆ ಸೇರಿದ ಈ ಮುಂಡಿಗೆ ಸಸ್ಯ ಸಾಮಾನ್ಯವಾಗಿ ನದಿ, ತೊರೆ, ಹಳ್ಳಗಳ ಬದುಗಳಲ್ಲಿ ಬೆಳೆಯುತ್ತದೆ. ಜೌಗು ಪ್ರದೇಶಗಳಲ್ಲಿ ಪೊದೆಪೊದೆಯಾಗಿ ಬೆಳೆಯುವುದುಂಟು. ಇದರ ಉದ್ದನೆಯ ಎಲೆಗಳ ಅಂಚಿನಲ್ಲಿ ಮುಳ್ಳುಗಳು ಇರುತ್ತವೆ. ಅನಾನಸ್ ಗಿಡಗಳನ್ನು ನೆನಪಿಗೆ ತರುವ ಇವು ಅನಾನಸಿನಂತಹ ಫಲವನ್ನು ಬಿಡುತ್ತವೆ. ದೂರದಿಂದ ನೋಡಲು ಹಲಸಿನ ಹಣ್ಣನ್ನು ಹೋಲುವಂತಹ ಇದನ್ನು ಯಾರೂ ತಿನ್ನುವುದಿಲ್ಲ. ಹಿಂದಿನ ಕಾಲದಲ್ಲಿ ಈ ಗಿಡದ ಎಲೆಗಳನ್ನು ಕತ್ತರಿಸಿ, ಒಣಗಿಸಿದ ಮೇಲೆ ಸೀಳಿ ಚಾಪೆಗಳನ್ನು ಹೆಣೆಯುತ್ತಿದ್ದರು. ಅಪರೂಪಕ್ಕೆ ಕಂಡ ಈ ಮುಂಡಿಗೆ ಫಲವನ್ನು ಕ್ಯಾಮೆರಾದಲ್ಲಿ ಸೆರೆಹಿಡಿಯಲಾಗಿದೆ.

—ಧರ್ಮಾನಂದ ಶಿರ್ವ, ಬೆಂಗಳೂರು

## ಕಲಾತ್ಮಕ ಕಾಷ್ಠ ಶಿಲ್ಪ!

ಮನೆ ಮತ್ತಿತರ ವಾಸ್ತು ಕಟ್ಟಡಗಳಲ್ಲಿ ಇತ್ತೀಚೆಗೆ ಮರದ ಬಳಕೆ ಕಡಿಮೆಯಾಗುತ್ತಿದೆ. ನಮ್ಮ ಹಳ್ಳಿಗಳಲ್ಲೂ ಕಾಂಕ್ರೀಟ್ ಕಟ್ಟಡಗಳೇ ತಲೆಯೆತ್ತಿ ನಿಲ್ಲುತ್ತಿವೆ. ಮರಗಳು ಮರೆಯಾಗಿ ಕಾಂಕ್ರೀಟ್ ಜಂಗಲ್ ಕಾಣಿಸುತ್ತಿದೆ. ಅಪರೂಪಕ್ಕೆಂಬಂತೆ ಉಡುಪಿ ಜಿಲ್ಲೆಯ ಹಿರಿಯಡಕ ಎಂಬಲ್ಲಿ ಶ್ರೀವೀರಭದ್ರ ದೇವಸ್ಥಾನ ಇತ್ತೀಚಿನ ವರ್ಷಗಳಲ್ಲಿ ಜೀರ್ಣೋದ್ಧಾರಗೊಂಡಿದ್ದು ಅಲ್ಲಿ ಮರದ ಬಳಕೆಯನ್ನು ಕಲಾತ್ಮಕವಾಗಿ ಮಾಡಲಾಗಿದೆ. ದೇವಳದ ಗರ್ಭಗುಡಿ ಮತ್ತಿತರ ಗುಡಿಗಳ ಹೊರ ಗೋಡೆಗಳನ್ನು ಮರಮಟ್ಟುಗಳ ಸುಂದರ ಶಿಲ್ಪ ವಿನ್ಯಾಸಗಳೊಂದಿಗೆ ನಿರ್ಮಿಸಲಾಗಿದ್ದು ಕಲೆಯ ಬಲೆಯಂತೆ ಕಂಡುಬಂದು ಭಕ್ತಾದಿಗಳ ಮನಸೂರೆಗೈಯುತ್ತದೆ.

—ರಮಣ್ ಶೆಟ್ಟಿ ರೆಂಜಾಳ್, ಮುಂಬಯಿ

